## ಕಲ್ಪನೆ ಕಾವ್ಯ



## ಬಸವನ ಹುಳುಗಳು

ಸ್ಥಾವರಕ್ಕೆ ದುಡಿಯುವವರು
ಜಂಗಮ ಬದುಕಿನವರು

ಎತ್ತರಕ್ಕೆ ಏರಿ
ಇಟ್ಟಿಗೆಯ ಹೇರಿ
ನೆಲಕ್ಕೊರಗಿ ತೆವಳುವ
ಬಸವನ ಹುಳುಗಳು

ಬಹುಮಹಡಿಯ ಇಟ್ಟಿಗೆ
ಹೊತ್ತು ತಂದ ಬೆವರಿಗೆ
ಇಲ್ಲ ಗೃಹಪ್ರವೇಶದ ಸಂಭ್ರಮ

ಮಣ್ಣು ನೀರು ಬೆಂಕಿ ಬಳಸಿ
ಮಹಡಿಯ ಮನೆ ಕಟ್ಟಿ
ಬೀದಿಗೆ ಸರಿದ
ಶ್ರಮಕ್ಕೆ ಬಿಡಿಗಾಸು
ಪಂಚಭೂತಗಳೇ ನಿಬ್ಬೆರಗು

ಇಟ್ಟಿಗೆಯ ನಸುಗೆಂಪು
ಕಣ್ಣಕಾಂತಿಯ ಹೆಚ್ಚಿಸೀತು
ಇಟ್ಟಿಗೆಯ ಸುಟ್ಟ ಬೆಂಕಿ
ಒಡಲ ಬೆಂಕಿಯ ನಂದಿಸೀತು

**-ಸಾವಿತ್ರಿ ಮುಜುಮದಾರ,**
**ಕೊಪ್ಪಳ**

## ಬದುಕು 'ಸುಟ್ಟ ಇಟ್ಟಿಗೆ'

ಬಾಳ ಬೇಗೆಯಲಿ
ಎದೆಗೂಡು ಬೆಂದಾಗ,
ಅಸ್ಥಿಪಂಜರದೊಡಲು
ಕೈಚಾಚಿದಾಗ,
ಕರಗುವುದು ಗೂಡಿನ ಇಟ್ಟಿಗೆ!

ಹದವರಿತು ಮಿದುವಾಗಿ
ಬಿಕ್ಕಟ್ಟಿನಲಿ ಗಟ್ಟಿಯಾದರೂ,
ಬದುಕು 'ಸುಟ್ಟ ಇಟ್ಟಿಗೆ'!
ಬೆವರ ಮಳೆ ಸುರಿದು
ನಿಟ್ಟುಸಿರು ಚಿಮ್ಮಿ ಬಂದರೂ,
ತುಂಬಿತೇ ಬಾಳಬಿಂದಿಗೆ!

ಕನಸುಗಳನೆ 'ಹೊತ್ತು'
ಯಾರದೊ ಕೂಸಿಗೆ
ಬಸಿರಾಗಿ,
ಹೆತ್ತು ಕೊಟ್ಟರು ಬಂಗಲೆ
ಬಾಡಿಗೆ ತಾಯಂತೆ!

ಬಂಗಲೆ ಬಣ್ಣ ಧರಿಸಿ
ಮಣ್ಣ ಜಾಡು ಮರೆಸಿ
ನಿಂತಾಗ,
ಬಿಸಿ ಉಸಿರು ಹೇಳಿತು,
ಬದುಕು 'ಸುಟ್ಟ ಇಟ್ಟಿಗೆ'..!

**-ಸುಶ್ಮಿತಾ ವೈ., ನಗರ**